**CC 236/2021**
**PW.1**

**ಸಾಕ್ಷಿಗೆ ದಿನಾಂಕ 18.12.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಆರೋಪಿಯು ನನಗೆ 5 ವರ್ಷಗಳಿಂದ ಪರಿಚಯಸ್ಥರು. ಆರೋಪಿಯು ಬಂಗಾರದ ಅಂಗಡಿಯನ್ನು ಇಟ್ಟುಕೊಂಡಿದ್ದರು ಹಾಗಾಗಿ ಅವರು ನನಗೆ ಪರಿಚಯವಾಗಿರುತ್ತಾರೆ. 5 ವರ್ಷಗಳ ಮೊದಲು ನಾನು ಹಾಗೂ ನನ್ನ ಯಜಮಾನರು ಆರೋಪಿಗೆ ಹಣವನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಒಡವೆ ಮಾಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. 72 ಗ್ರಾಮ್‌ಗೆ ಒಡವೆ ಮಾಡಲು ಹೇಳಿದ್ದೆವು ಒಟ್ಟು 66 ಗ್ರಾಂ.ಗೆ ಮಾಡಲಾಗಿರುತ್ತದೆ. 5 ವರ್ಷದ ಹಿಂದೆ ಒಡವೆ ಮಾಡಲು ನೀಡಿದ್ದೆವು. ಒಡವೆಯನ್ನು ಮಾಡಿಸಲು ನಾನೇ ಹೋಗಿರುತ್ತೇನೆ. ಜನವರಿಯಲ್ಲಿ ಮಾಡಲು ನೀಡಿದ್ದು, ಅದೇ ತಿಂಗಳಿನಲ್ಲಿ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಮುಂದುವರೆದು ಫೆಬ್ರವರಿ ತಿಂಗಳಿನಲ್ಲಿ ಪಡೆದುಕೊಂಡಿರುತ್ತೇನೆ. ಆರೋಪಿಯು ಒಡವೆಗಳನ್ನು ಮಾಡಿ ನನಗೆ ಕೊಟ್ಟಿರುತ್ತಾರೆ. ಪಿರ್ಯಾದಿನಲ್ಲಿ ಹೇಳಿರುವಂತೆ ಮಜೂರಿ ಹಾಗೂ ವೇಸ್ಟೇಜ್‌ನ್ನು ಒಳಗೊಂಡು ಒಂದು72 ಗ್ರಾಂ ಬಂಗಾರ ಆಗಿದ್ದು, ಆರೋಪಿಯು ಸದರಿ 66 ಗ್ರಾಂ.ಗಳನ್ನು ಹಿಂದಿರುಗಿಸಿರುತ್ತಾರೆ. ಫೆಬ್ರವರಿ 2020 ರಲ್ಲಿ ಒಡವೆಗಳನ್ನು ನಾನೇ ರಿಪೇರಿಗೆಂದು ಆರೋಪಿಯ ಬಳಿ ಕೊಟ್ಟಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯು ಒಂದು ಬಿಲ್ಲಿನ ಸ್ಲಿಪ್ ಆಗಿದ್ದು, ಸಾಕ್ಷಿಯು ಸದರಿ ದಾಖಲೆಯು ಆರೋಪಿಯದು ಎಂದು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸದರಿ ದಾಖಲೆಯು ಅವರು ಆರೋಪಿಯ ಬಳಿ ಒಡವೆಯನ್ನು ಹಣವನ್ನು ನೀಡಿ ತೆಗೆದುಕೊಂಡ ದಾಖಲೆ ಆಗಿರುತ್ತದೆ ಎಂದರೆ ಸಾಕ್ಷಿಯು ಆರೋಪಿಯು ನಮ್ಮ ಬಳಿ ಹಣವನ್ನು ಪಡೆದುಕೊಂಡಾಗ ಅದರಲ್ಲಿ ಬರೆಯುತ್ತಿದ್ದರು ಎಂದು ನುಡಿಯುತ್ತಾರೆ. ನಾನೂ ಸಹ ಹಣವನ್ನು ನೀಡಿದ ಸಮಯದಲ್ಲಿ ಚೀಟಿಯನ್ನು ಬರೆಸಿಕೊಳ್ಳುತ್ತಿದ್ದೆ. ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ನಿಡಿ-1 ರಲ್ಲಿ ಇರುವ ದಿಃ 31.01.2019 ರಲ್ಲಿಯೇ ನನ್ನ ಮತ್ತು ಆರೋಪಿಯ ನಡುವೆ ಆದ ವ್ಯವಹಾರವನ್ನು ಪಿರ್ಯಾದಿಯಲ್ಲಿ ನಮೂದು ಮಾಡಿರುತ್ತೀರಾ ಎಂದರಗೆ ಗೊತ್ತಿಲ್ಲ. ಆರೋಪಿಯ ಒಂದು ಕಾರು ಮತ್ತು ಬೈಕು ನಮ್ಮ ಬಳಿ 15 ದಿನಗಳ ಕಾಲ ಇತ್ತು ಎಂದರೆ ಸರಿ. ಆರೋಪಿಯ ಹೆಂಡತಿಯ ಬಳಿ ಚೆಕ್ಕುಗಳನ್ನು ಪಡೆದುಕೊಂಡು ಕಾರು ಮತ್ತು ಬೈಕ್‌ಗಳನ್ನು ಹಿಂದಿರುಗಿಸಿರುತ್ತೇವೆ. ಸಾಕ್ಷಿಯು ಮುಂದುವರೆದು ಚೆಕ್ಕುಗಳು ನಮ್ಮ ಬಳಿಯೇ ಇರುತ್ತವೆ ಎಂದು ನುಡಿಯುತ್ತಾರೆ. ಆರೋಪಿಯ ಬಳಿ ಒಟ್ಟಾರೆ 4 ಚೆಕ್ಕುಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿ ಹಾಗೂ ಅವರ ಹೆಂಡತಿಯು ಒಂದು ಕರಾರನ್ನು ಮಾಡಿಕೊಟ್ಟಿದ್ದು, ಅದೂ ಸಹ ನನ್ನ ಬಳಿ ಇರುತ್ತದೆ ಎಂದರೆ ಸರಿ. ನಿಡಿ-1 ರ ಪ್ರಕಾರ ಒಡವೆಯ ಒಟ್ಟು ಮೊತ್ತ ರೂ. 2,07,890/- ಆಗಿದ್ದು, ಒಟ್ಟು ರೂ. 4 ಲಕ್ಷ ಮೊತ್ತಕ್ಕೆ ಹೆಚ್ಚಿನ ಹಾಕಿ ನ್ಯಾಯಾಲಯಕ್ಕೆ ಚೆಕ್ಕನ್ನು ಹಾಕಿರುತ್ತೀರಾ ಎಂದರೆ ನಮ್ಮ ವಕೀಲರು ಹಾಕಿಸಿರುತ್ತಾರೆ ಎಂದು

ನುಡಿಯುತ್ತಾರೆ. ಆರೋಪಿಯ ಹೆಂಡತಿಯು ನೀಡಿದ ಚೆಕ್ಕುಗಳು ಸಹ ನನ್ನ ಹತ್ತಿರ ಇರುತ್ತವೆ. ಆರೋಪಿಯ ಹೆಂಡತಿ ಸುಧಾ ನನಗೆ ಗೊತ್ತು. ಒಟ್ಟಾರೆ 4 ಚೆಕ್ಕುಗಳು ಯಾರ ಬಳಿ ಇವೆ ಎಂದರೆ ವಕೀಲರ ಬಳಿ ಇರುಬಹುದು ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲು: ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತ ಲೇಖನದ ಮೇಲೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ ಮತ್ತು ಸರಿ ಇದೆ.**

**ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ದೊಡ್ಡಬಳ್ಳಾಪುರ.**